
# ಶ್ರೀರಾಮಕೃಷ್ಣರ ನೇರ ಶಿಷ್ಯಂದಿರನ್ನು ಕುರಿತ ಕನ್ನಡ ಗ್ರಂಥಗಳು

**ಸ್ವಾಮಿ ಅಘಹರಾನಂದ**

ಶ್ರೀರಾಮಕೃಷ್ಣರ ನೇರ ಶಿಷ್ಯಂದಿರಲ್ಲಿ ಒಬ್ಬೊಬ್ಬರೂ ಆಧ್ಯಾತ್ಮಿಕ ಸೂರ್ಯರಂತಿದ್ದರು. ಅವರ ಜೀವನ, ಉಪದೇಶಗಳನ್ನು ಕುರಿತಂತೆ ಕನ್ನಡದಲ್ಲಿ ಅನೇಕ ಪುಸ್ತಕಗಳು ಹೊರಬಂದಿವೆ. ಹೆಚ್ಚು ಪ್ರಚಲಿತವಲ್ಲದಿದ್ದರೂ, ಶ್ರೀರಾಮಕೃಷ್ಣ ಭಾವಧಾರೆಯಲ್ಲಿ ಅತ್ಯಂತ ಮುಖ್ಯವಾದ ಈ ಗ್ರಂಥಗಳ ಬಗ್ಗೆ ಇಲ್ಲಿ ಬರೆದಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

### ಪೀಠಿಕೆ

ಶ್ರೀರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯವರ ಹಾಗೂ ಸ್ವಾಮಿ ವಿವೇಕಾನಂದರ ಜೀವನ-ಸಂದೇಶಗಳು ಮನುಕುಲಕ್ಕೆ ದಾರಿದೀಪವಾಗಿವೆ. ಶತಶತಮಾನಗಳವರೆಗೆ ಇವರುಗಳ ಜೀವನ ಮಾನವರನ್ನು ಮಾಧವರನ್ನಾಗಿಸುವ ಕಾರ್ಯ ಮಾಡಲಿವೆ. ಶ್ರೀರಾಮಕೃಷ್ಣರಿಗೆ ಸ್ವಾಮಿ ವಿವೇಕಾನಂದರ ಹೊರತಾಗಿ ಇನ್ನೂ ೧೫ ಸಂನ್ಯಾಸಿ ಶಿಷ್ಯರಿದ್ದರು. ಹಾಗೆಯೇ ಅನೇಕ ಗೃಹಸ್ಥ ಭಕ್ತರಿದ್ದರು. ಅವರುಗಳ ಜೀವನ-ಸಂದೇಶದ ಕುರಿತಾಗಿ ಅಸಂಖ್ಯಾತ ಜನರಿಗೆ ಸೂಕ್ತವಾದ ಮಾಹಿತಿಯಿಲ್ಲ. ಕನ್ನಡದಲ್ಲಿ ಇವರುಗಳ ಕುರಿತಾಗಿ ಅನೇಕ ಪುಸ್ತಕಗಳು ಪ್ರಕಟಗೊಂಡಿವೆ. ಬಹುಜನ ಭಕ್ತರಿಗೆ ಈ ಪುಸ್ತಕಗಳ ಕುರಿತಾಗಿ ಪರಿಚಯಾತ್ಮಕ ಮಾಹಿತಿಯನ್ನು ನೀಡುವುದೇ ಈ ಲೇಖನದ ಉದ್ದೇಶ. ಇಂತಹ ಕೆಲವಾರು ಪುಸ್ತಕಗಳ ಬಗ್ಗೆ ಅರಿಯುವ ಪ್ರಯತ್ನ ಮಾಡೋಣ.




### ೧) ಅಮೃತವಾಣಿ

ತಾಯಿಗೆ ತನ್ನ ಎಲ್ಲ ಮಕ್ಕಳಲ್ಲಿಯೂ ಸಮ ಪ್ರೀತಿಯೇ. ಆದರೆ ಪ್ರತಿ ಮಗುವಿಗೂ ಅದಕ್ಕೆ ಒಗ್ಗುವ ಆಹಾರವನ್ನು ಮಾತ್ರ ಕೊಡುತ್ತಾಳೆ. ಅದೇ ರೀತಿ ಬೇರೆ ಬೇರೆ ಆಧ್ಯಾತ್ಮಿಕ ಮಟ್ಟದಲ್ಲಿರುವ ಭಿನ್ನ ಸಾಮರ್ಥ್ಯದವರಿಗಾಗಿ ಭಗವಂತನು ಬೇರೆ ಬೇರೆ ಉಪಾಸನಾವಿಧಾನಗಳನ್ನು ಕಲ್ಪಿಸಿಕೊಟ್ಟಿದ್ದಾರೆ ಎನ್ನುತ್ತಾರೆ ಶ್ರೀರಾಮಕೃಷ್ಣರು. ವಿಭಿನ್ನ ಸಾಧಕರಿಗೆ ಅವರವರ ಮನೋಧರ್ಮಕ್ಕೆ ಅನುಗುಣವಾಗಿ ವಿಶೇಷ ಸೂಚನೆಗಳನ್ನು ನೀಡಬೇಕಾಗುತ್ತದೆ. ಈ ಗ್ರಂಥದಲ್ಲಿ ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು, ಸ್ವಾಮಿ ವಿವೇಕಾನಂದರು ಹಾಗೂ ಬ್ರಹ್ಮಾನಂದ, ಶಿವಾನಂದ, ತುರೀಯಾನಂದ, ಶಾರದಾನಂದ, ರಾಮಕೃಷ್ಣಾನಂದ, ಅದ್ಭುತಾನಂದರುಗಳು ಆಧ್ಯಾತ್ಮಿಕ ಸಾಧಕರಿಗೆ ನೀಡಿದ ಕೆಲವಾರು ಉಪಯುಕ್ತ ಸಲಹೆಗಳನ್ನು ಸಂಗ್ರಹಿಸಲಾಗಿದೆ.

### ೨) ಮುಕ್ತಿಮಾರ್ಗ

೧೮೬೩ರಲ್ಲಿ ಜನಿಸಿದ ಸ್ವಾಮಿ ರಾಮಕೃಷ್ಣಾನಂದರು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರಲ್ಲಿ ಒಬ್ಬರು. ಜ್ಞಾನ, ಭಕ್ತಿಗಳ ಸಂಗಮವಾಗಿದ್ದ ಅವರು ಎಷ್ಟರಮಟ್ಟಿಗೆ ಧ್ಯಾನಸಿದ್ಧರೋ, ಅಷ್ಟೇ ಬಾಹ್ಯ ಪೂಜೆಯಲ್ಲಿಯೂ ಆಸಕ್ತರಾಗಿದ್ದರು. ಗುರುಭಕ್ತಿಯೇ ಮೂರ್ತಿವೆತ್ತಂತೆ ಇದ್ದರು ಅವರು. ಅವರ ಗುರುಭಕ್ತಿಯನ್ನು ನೋಡಿ ಸ್ವಾಮಿ ವಿವೇಕಾನಂದರು ಅವರಿಗೆ ರಾಮಕೃಷ್ಣಾನಂದ ಎಂಬ ಹೆಸರನ್ನು ಕೊಟ್ಟರು. ದಕ್ಷಿಣ ಭಾರತದಲ್ಲಿ ಶ್ರೀರಾಮಕೃಷ್ಣರ ಸಂದೇಶವನ್ನು ಪಸರಿಸಿದವರಲ್ಲಿ ಪ್ರಮುಖರು ಇವರು. ಇವರು ನೀಡಿದ ಒಂದು ಉಪನ್ಯಾಸದ ಕನ್ನಡ ಭಾಷಾಂತರವನ್ನು ಈ ಪುಸ್ತಕದಲ್ಲಿ ಮುದ್ರಿಸಲಾಗಿದೆ.

### ೩) ನೊಂದ ಜೀವಕ್ಕೆ ಭರವಸೆ


ಮಹಾವೀರ ಹನುಮಂತನಿಗೆ ಶ್ರೀರಾಮಚಂದ್ರನ ಮೇಲೆ ಇದ್ದಂತಹ ಪ್ರೇಮಕ್ಕೆ ಸರಿದೂಗಬಲ್ಲ ಪ್ರೇಮ ಸ್ವಾಮಿ ರಾಮಕೃಷ್ಣಾನಂದರಿಗೆ ಶ್ರೀರಾಮಕೃಷ್ಣರ ಮೇಲೆ ಇತ್ತು ಎನ್ನುತ್ತಾರೆ ಸ್ವಾಮಿ ಶಿವಾನಂದರು. ಸ್ವಾಮಿ ರಾಮಕೃಷ್ಣಾನಂದರು ತಮ್ಮ ಅಸಂಖ್ಯಾತ ಭಕ್ತರಿಗೆ ಬರೆದ ಪತ್ರಾವಳಿಯ ಸಂಗ್ರಹವೇ ಈ ಕಿರುಹೊತ್ತಿಗೆ.

### ೪) ಪುನರ್ಜನ್ಮ

ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಅಭೇದಾನಂದರು ೧೮೯೬ರಲ್ಲಿ ಲಂಡನ್ನಿಗೆ ತೆರಳಿ ವೇದಾಂತದ ಪ್ರಚಾರದಲ್ಲಿ ತೊಡಗುತ್ತಾರೆ. ಅಂದಿನ ಹೆಸರಾಂತ ಚಿಂತಕರ, ವಾಗ್ಮಿಗಳ, ಸಾಹಿತಿಗಳ ಹಾಗೂ ವಿಜ್ಞಾನಿಗಳ ನಿಕಟ ಪರಿಚಯವನ್ನು ಪಡೆದು, ವೇದಾಂತ ತತ್ತ್ವಗಳ ವೈಶಾಲ್ಯತೆ, ಗಂಭೀರತೆ ಮತ್ತು ಪ್ರಾಸಂಗಿಕತೆಯನ್ನು ಅವರಿಗೆ ಮನದಟ್ಟು ಮಾಡುವಲ್ಲಿ ಸಫಲರಾಗುತ್ತಾರೆ. ಪುನರ್ಜನ್ಮವನ್ನು ಕುರಿತು ಪಾಶ್ಚಾತ್ಯರಿಗೆ ಹಲವಾರು ಪ್ರವಚನಗಳನ್ನು ನೀಡುತ್ತಾರೆ.

ವಿಕಾಸವಾದ ಪೂರ್ಣವಾಗಬೇಕಾದರೆ ಪುನರ್ಜನ್ಮ ಸಿದ್ಧಾಂತವನ್ನು ಒಪ್ಪಿಕೊಳ್ಳುವುದು ನ್ಯಾಯಸಮ್ಮತವಾಗಿದೆ ಎಂಬುದು

ಇವರ ಅಭಿಪ್ರಾಯವಾಗಿತ್ತು. ೧೮೯೮ರ ಫೆಬ್ರುವರಿ ೧೩ರಂದು ಪ್ರಥಮ ಬಾರಿಗೆ ನ್ಯೂಯಾರ್ಕಿನಲ್ಲಿ ಇವರು ಪ್ರವಚನ ನೀಡಿದಾಗ ಜನ ಬಹಳ ಮೆಚ್ಚಿದ್ದು, ಮತ್ತೆ ಮತ್ತೆ ಅದಕ್ಕೆ ಬೇಡಿಕೆ ಬಂದಿತು. ಆ ಉಪನ್ಯಾಸಗಳ ಕನ್ನಡ ಭಾಷಾನುವಾದವೇ ಈ ಪುಸ್ತಕವಾಗಿ ಪ್ರಕಟಗೊಂಡಿದೆ.





### ೫) ಅದ್ಭುತವಾಣಿ

ಲಾಟು (ಸ್ವಾಮಿ ಅದ್ಭುತಾನಂದರು) ಶ್ರೀರಾಮಕೃಷ್ಣರ ಪರಮಾದ್ಭುತ ಪವಾಡ. ಸಂಪೂರ್ಣ ಅನಕ್ಷರಸ್ಥರಾಗಿದ್ದ ಅವರು, ಶ್ರೀರಾಮಕೃಷ್ಣರ ಸ್ಪರ್ಶಮಾತ್ರದಿಂದಲೇ ಪರಮಜ್ಞಾನಿಯಾದರು ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ನಿನ್ನ ಮುಖದಿಂದ ವೇದವೇದಾಂತಗಳು ಹೊರಬರುವವು ಎಂದು ಶ್ರೀರಾಮಕೃಷ್ಣರಿಂದ ಆಶೀರ್ವಾದ ಪಡೆದ ಸ್ವಾಮಿ ಅದ್ಭುತಾನಂದರು, ಆಧ್ಯಾತ್ಮಿಕ ಜೀವನವನ್ನು ಕುರಿತಾಗಿ ನೀಡಿದ ಉಪದೇಶಗಳು ಹಾಗೂ ಭಕ್ತರೊಂದಿಗೆ ಅವರು ನಡೆಸಿದ ಸಂಭಾಷಣೆಗಳು ಈ ಪುಸ್ತಕದ ಸಾರ ವಸ್ತುವಾಗಿದೆ.

### ೬) ಬ್ರಹ್ಮಾನಂದ ವಚನಸುಧೆ

ಶ್ರೀರಾಮಕೃಷ್ಣ ಪರಮಹಂಸರ ಕಠೋರ ಸಾಧನೆಯಿಂದ ಗಳಿಸಿದ ಸಾಕ್ಷಾತ್ಕಾರದ ಅಮೃತವು ಹಲವು ನಾಲೆಗಳ ಮೂಲಕ ಭವಜೀವಿಗಳ ಉದ್ಧಾರಕ್ಕೆ ಹರಿದು ಬಂದಿದೆ. ಅದರಲ್ಲಿ ಪರಮಹಂಸರ ಮಾನಸಿಕ ಪುತ್ರರಂತೆ ಇದ್ದ ಬ್ರಹ್ಮಾನಂದರು ಒಂದು ಅತಿಮುಖ್ಯ ನಾಲೆ. ಎಷ್ಟೋ ಜೀವಿಗಳು ಅವರ ಸಂಪರ್ಕದಿಂದ ಉದ್ಧಾರವಾಗಿರುವರು.




ಆಧ್ಯಾತ್ಮಿಕ ಜೀವನದಲ್ಲಿ ಮುನ್ನಡೆಯಬೇಕೆಂದು ಬಯಸುವವರಿಗೆ 'ಬ್ರಹ್ಮಾನಂದ ವಚನಸುಧೆ' ಎಂಬುದು ಒಂದು ಪಠ್ಯ ಪುಸ್ತಕದಂತೆ ಇದೆ. ಸಾಧಕರ ಜೀವನದಲ್ಲಿ ಬರುವ ಹಲವಾರು ಶಂಕೆ, ಆತಂಕಗಳನ್ನು ಮತ್ತು ಅವುಗಳನ್ನು ಹೇಗೆ ಎದುರಿಸಿ ಪಾರಾಗಬೇಕೆಂಬುದನ್ನು ಸ್ವಾಮಿ ಬ್ರಹ್ಮಾನಂದರು ವಿವರಿಸಿರುವರು. ಈ ಗ್ರಂಥದಲ್ಲಿರುವುದೆಲ್ಲ ಅವರ ಅನುಭವದ ಮಾತು. ಆತ್ಮಸಾಕ್ಷಾತ್ಕಾರವನ್ನು ಪಡೆದ ಪೂಜ್ಯತಮ ವ್ಯಕ್ತಿಯ ಹೃದಯಾಂತರಾಳದಿಂದ ಜಿನುಗಿ ಬಂದ ವಚನಸುಧೆ ಇದು.

### ೭) ಸಾಧಕರ ಕೈದೀವಿಗೆ

''ಇದುವರೆಗೂ ನನ್ನ ಉಪನ್ಯಾಸಗಳನ್ನು ಕೇಳಿದಿರಿ. ಆ ಚಿಂತನೆಗಳನ್ನು ಜೀವನದಲ್ಲಿ ಹೇಗೆ ಅನುಷ್ಠಾನಕ್ಕೆ ತರುವುದು ಎಂಬುದನ್ನು ತೋರುವವನೊಬ್ಬನನ್ನು ನಾನು ನಿಮ್ಮಲ್ಲಿ ಕಳುಹಿಸುತ್ತೇನೆ'' ಎಂದು ಸ್ವಾಮಿ ವಿವೇಕಾನಂದರು ಅಮೇರಿಕಾ ದೇಶದ ತಮ್ಮ ಶಿಷ್ಯರಿಗೆ ಹೇಳಿದ್ದರು. ಅನಂತರ ಹಾಗೆ ಸ್ವಾಮಿ ವಿವೇಕಾನಂದರು ಕಳುಹಿಸಿದ ವ್ಯಕ್ತಿಯೇ ಸ್ವಾಮಿ ತುರೀಯಾನಂದರು. ಸ್ವಾಮಿ ತುರೀಯಾನಂದರು ಯಾವ ಪುಸ್ತಕವನ್ನೂ ಬರೆಯಲಿಲ್ಲ. ಕೆಲವು ಭಕ್ತರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಿದ್ದರು. ಅದನ್ನು ಹತ್ತಿರವಿದ್ದು ಕೇಳಿದವರು ಅನಂತರ ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಈ ಸಂಕಲನ ಅದರ ಕನ್ನಡ ಅನುವಾದ.

### ೮) ಭಾರತದಲ್ಲಿ ಶಕ್ತಿಪೂಜೆ


ಶ್ರೀಮಾತೆ ಶಾರದಾದೇವಿಯವರಿಗೆ ಅನವರತ ಸೇವೆ ಸಲ್ಲಿಸಿ, ಅವರ ಕೃಪೆಯಿಂದ ಪ್ರತಿಯೊಬ್ಬ ಸ್ತ್ರೀಯರಲ್ಲಿಯೂ ಸಾಕ್ಷಾತ್ ಜಗನ್ಮಾತೆಯನ್ನು ಕಂಡು, ಆಧ್ಯಾತ್ಮಿಕ ಉನ್ನತ ಅವಸ್ಥೆಗೆ ತಲುಪಿದವರು ಸ್ವಾಮಿ ಶಾರದಾನಂದರು. ಭಾರತದಲ್ಲಿ ಶಕ್ತಿಪೂಜೆ ಬೆಳೆದು ಬಂದ ಹಿನ್ನೆಲೆ, ಅದರ ವೈಶಿಷ್ಟ್ಯ ಹಾಗೂ ಪ್ರಾಯೋಗಿಕತೆಯ ಕುರಿತಾಗಿ ಅವರು ಬರೆದ ಲೇಖನಗಳ ಕನ್ನಡಾನುವಾದವೇ ಈ ಪುಸ್ತಕ.

### ೯) ಆದರ್ಶಭಕ್ತ ನಾಗಮಹಾಶಯ

''ಸಂಸಾರದಲ್ಲಿ ಮೀನಿನಂತೆ ಬಾಳನ್ನು ನಡೆಸಿರಿ. ಮೀನು ಕೆಸರಿನಲ್ಲೇ ಬದುಕುತ್ತದೆ. ಆದರೆ ಅದರ ಮೈಗೆ ಒಂದಿಷ್ಟೂ ಕೆಸರು ಅಂಟಿಕೊಂಡಿರುವುದಿಲ್ಲ. ಅದೇ ರೀತಿ ಭಗವಂತನಲ್ಲಿಯೇ ಮನಸ್ಸನ್ನಿಟ್ಟು ಸಂಸಾರದ ಕಾರ್ಯಭಾರಗಳನ್ನು ನಡೆಸಿದಾಗ ನಾವು ಅವುಗಳಿಂದ ಬಾಧಿತರಾಗುವುದಿಲ್ಲ'' ಎಂಬ ಶ್ರೀರಾಮಕೃಷ್ಣರ ಉಪದೇಶವನ್ನು ಅನುಷ್ಠಾನ ಮಾಡಿದ ಆದರ್ಶ ಭಕ್ತ ಶ್ರೀ ನಾಗಮಹಾಶಯರು. ಯಾರ ಅದ್ಭುತ ದೈನ್ಯವು ಸರ್ವಂಸಹೆ ಎಂದು ಹೆಸರು ಪಡೆದಿರುವ ಭೂದೇವಿಯನ್ನೂ ಜಯಿಸಿತೋ, ಯಾರು ಗೃಹಸ್ಥರಾಗಿದ್ದರೂ ಸರ್ವತ್ಯಾಗಿಗಳಾದ ಸಂನ್ಯಾಸಿಗಳ ಶ್ರದ್ಧಾಭಕ್ತಿಗಳಿಗೆ ಪಾತ್ರರೆಂದು ಗಣ್ಯರಾಗಿದ್ದರೋ, ಮತ್ತು ಯಾರ ತ್ಯಾಗ, ಕ್ಷಮೆ, ತಪಸ್ಸು ಮತ್ತು ತೀವ್ರ ತೇಜಸ್ವಿತೆಗಳು ನಿಜವಾಗಿಯೂ ಅಲೋಕಸಾಮಾನ್ಯವಾಗಿದ್ದವೋ, ಆ ಶ್ರೀರಾಮಕೃಷ್ಣ ಗತಪ್ರಾಣರಾದ ನಾಗಮಹಾಶಯರ ಜೀವನ ಚರಿತ್ರೆ ಇದು.

### ೧೦) ಬ್ರಹ್ಮಾನುಭವಿ

ಶ್ರೀರಾಮಕೃಷ್ಣರ ಸಂದೇಶವನ್ನು ದಿಗ್ದಿಗಂತಗಳಲ್ಲಿಯೂ ಪಸರಿಸಿ ತಾತ್ತ್ವಿಕ ಬುನಾದಿಯನ್ನು ರೂಪಿಸಿದವರು ಸ್ವಾಮಿ ವಿವೇಕಾನಂದರಾದರೆ, ಸಂಘದ ಮೊದಲ ಅಧ್ಯಕ್ಷರಾಗಿ ತಮ್ಮ ತಪೋಮಯ ಜೀವನದಿಂದ ಅಸಂಖ್ಯಾತ ಸಾಧು-ಬ್ರಹ್ಮಚಾರಿಗಳ




ಬಾಳಿಗೆ ಬೆಳಕನ್ನಿತ್ತು, ಆಧ್ಯಾತ್ಮಿಕ ಅಡಿಪಾಯ ಹಾಕಿದವರು ಸ್ವಾಮಿ ಬ್ರಹ್ಮಾನಂದರು. ವಿವೇಕಾನಂದರೆಂದಂತೆ ಆಧ್ಯಾತ್ಮಿಕತೆಯ ಶಿಖರ ಅವರು. 'ಬ್ರಹ್ಮಾನುಭವಿ' ಎಂಬ ಗ್ರಂಥವು ತ್ಯಾಗ ಜೀವನದ, ಆಧ್ಯಾತ್ಮಿಕ ಸಾಧನೆಯ ಪರಮಾದರ್ಶವನ್ನು ಪರಿಪಾಲಿಸಿ ತೋರಿಸಿರುವ ಮಹಾಪುರುಷ ರಾದ ಸ್ವಾಮಿ ಬ್ರಹ್ಮಾ ನಂದರ ದಿವ್ಯಚರಿತ್ರೆ.

ಆಧ್ಯಾತ್ಮಿಕ ಜೀವನ ಎಂದರೇನು, ಬಾಳನ್ನು ಹೇಗೆ ನಡೆಸಬೇಕು, ಭಗವಂತನನ್ನು ಯಾವ ರೀತಿ ಪ್ರೀತಿಸಬೇಕು, ಅರ್ಚಿಸಬೇಕು, ಭಜಿಸಬೇಕು, ಸಾಧನ ಜೀವನದಲ್ಲಿ ಉಂಟಾಗುವ ದುಃಖ ಸಂಶಯಗಳನ್ನು ಹೇಗೆ ಪರಿಹರಿಸಬೇಕು ಎಂಬ ಹಲವಾರು ವಿಷಯಗಳನ್ನು ಸ್ಪಷ್ಟವಾಗಿ ತಿಳಿಸಿ ಮಾರ್ಗದರ್ಶನ ನೀಡಿದ್ದಾರೆ.

ಆಧ್ಯಾತ್ಮಿಕ ಪಥದಲ್ಲಿ ಮುನ್ನಡೆಯುವವರಿಗೆ ಬ್ರಹ್ಮಾನುಭವಿ ಗ್ರಂಥವು ಉನ್ನತವಾದ ದಾರಿದೀಪದಂತಿದೆ. ಪರಮಾನಂದವನ್ನು ಉಂಟುಮಾಡುವ ಅಮೃತಕಲಶದಂತಿದೆ. ಎಲ್ಲರ ಮನಸ್ಸನ್ನು ಸೂರೆಗೊಳ್ಳುವ ವಿಶಿಷ್ಟ ಘಟನೆಗಳಿಂದ ಕೂಡಿರುವ ಇದು ಮುಮುಕ್ಷುಗಳೆಲ್ಲರ ಅತ್ಯಂತ ಆದರಣೀಯ ಗ್ರಂಥವಾಗಿದೆ.

### ೧೧) ಹಿಮಾಲಯದ ಮಡಿಲಲ್ಲಿ


''ಹಿಮಾಲಯದ ಪವಿತ್ರ ಸ್ಥಳಗಳಿಗೆ ಭೇಟಿಕೊಟ್ಟ ನಾನು ಅಲ್ಲಿಯ ಕೆಲವು ಸ್ಥಳಗಳ ಶಾಂತ ವಾತಾವರಣ, ಭವ್ಯತೆಯ ಸೊಗಸು ಮತ್ತು ನಿರಾಕುಲತೆಯ ಗಾಂಭೀರ್ಯವನ್ನು ಕಂಡು ಅಚ್ಚರಿಯಿಂದ ಮೂಕನಾದೆ. ಆ ದಿನಗಳನ್ನು ನೆನಪು ಮಾಡಿಕೊಂಡರೆ ಸಾಕು, ನನ್ನ ಮೈಯ ನರನರವೂ ಕಂಪಿಸತೊಡಗುತ್ತದೆ, ಮತ್ತು ನನ್ನೊಳಗೆ ಶಾಂತ ಹಾಗೂ ಪವಿತ್ರ ಚಿಂತನೆಯ ಪ್ರವಾಹವೇ ಮೇಲೇರಿ ಬರಲಾರಂಭಿಸುತ್ತದೆ'' ಎಂದು ಬರೆಯುತ್ತಾರೆ ಸ್ವಾಮಿ ಅಖಂಡಾನಂದರು. ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಅಖಂಡಾನಂದರ ಹಿಮಾಲಯದ ಅನುಭವವನ್ನು ನಿರೂಪಿಸುವ ಪ್ರವಾಸಕಥನವಿದು.

### ೧೨) ಶ್ರೀರಾಮಕೃಷ್ಣ ಶಿಷ್ಯವೃಂದ

ಶ್ರೀರಾಮಕೃಷ್ಣರ ಶಿಷ್ಯರು, ಪರಮಹಂಸರ ಸಂದೇಶ ಜಗತ್ತಿಗೆ ಹರಿದು ಹೋಗುವುದಕ್ಕೆ ಇರುವ ನಾಲೆಗಳಂತೆ ಇದ್ದಾರೆ. ಪರಮಹಂಸರ ಸಾಕ್ಷಾತ್ಕಾರಾಮೃತ ಅವರ ಶಿಷ್ಯರೆಂಬ ನಾಲೆಗಳ ಮೂಲಕ ಹಲವು ಭವಜೀವಿಗಳಿಗೆ ತಾಕಿ ಅವರನ್ನು ಉದ್ಧರಿಸಿವೆ.

ಈ ಗ್ರಂಥದಲ್ಲಿ ಸ್ವಾಮಿ ವಿವೇಕಾನಂದರ ಹಾಗೂ ಶ್ರೀಮಾತೆ ಶಾರದಾದೇವಿಯವರ ವಿನಃ, ಉಳಿದ ಸಂನ್ಯಾಸಿ ಶಿಷ್ಯರು ಹಾಗೂ ಪ್ರಮುಖ ಗೃಹೀ ಶಿಷ್ಯರ ಜೀವನ ಚರಿತ್ರೆ ಇದೆ. ಇದು ವಿಧವಿಧವಾದ ಪುಷ್ಪಗಳಿಂದ ರಚಿತವಾದ ಬಗೆಬಗೆಯ ಪರಿಮಳವನ್ನು ಬೀರುತ್ತ, ಭವತಾರಿಣಿಯ ಕೊರಳಿನಲ್ಲಿ ರಾರಾಜಿಸುತ್ತಿರುವ ಹಾರದಂತೆ ಇದೆ.

### ೧೩) ಪರಿವರ್ತನೆ




ಶ್ರೀರಾಮಕೃಷ್ಣರ ಅನನ್ಯ ಆರಾಧಕನೂ, ಬಂಗಾಳದ ಆಧುನಿಕ ನಾಟಕ ಪ್ರಪಂಚದ ಪಿತಾಮಹನೂ ಆದ ಗಿರೀಶ್ ಚಂದ್ರ ಘೋಷನ ಜೀವನಚರಿತ್ರೆ ಇದು. ಗಿರೀಶನ ಜೀವನಗಾಥೆ ಪತಿತರಿಗೆ ಭರವಸೆಯ ಆಶಾಕಿರಣವಾಗಿದೆ. ಒಬ್ಬ ಪಾತಕಿ ಹೇಗೆ ಸಂತನಾಗಬಹುದು ಎಂಬುದಕ್ಕೆ ಆತನ ಜೀವನವೇ ಒಂದು ಪ್ರಮಾಣ. ಅದು ಭರವಸೆಯಿಲ್ಲದವರಿಗೆ ಭರವಸೆಯನ್ನು, ನಂಬಿಕೆಯಿಲ್ಲದವರಿಗೆ ನಂಬಿಕೆಯನ್ನು, ಮುಮುಕ್ಷುಗಳಿಗೆ ಉತ್ಸಾಹವನ್ನು ಕೊಡುತ್ತದೆ. ಗಿರೀಶನಲ್ಲಿ ಮಾತ್ರವೇ ನಾನು ಆ ನಿಜವಾದ ಶರಣಾಗತಿಯನ್ನು, ತಾನು ದೇವರ ಸೇವಕನೆಂಬ ಆ ನಿಜವಾದ ಭಾವವನ್ನು ಕಂಡಿರುವುದು, ಅವನ ಸಮಾನರನ್ನು ನಾನು ನೋಡಲಿಲ್ಲ; ಅವನಿಂದಲೇ ನಾನು ಆತ್ಮಸಮರ್ಪಣೆಯ ಪಾಠವನ್ನು ಕಲಿತಿರುವುದು ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

### ೧೪) ಸ್ವಾಮಿ ವಿಜ್ಞಾನಾನಂದರ ಸ್ಮೃತಿಸಂಚಯ

ಶ್ರೀರಾಮಕೃಷ್ಣ ಪರಮಹಂಸರ ಸಂನ್ಯಾಸಿ ಶಿಷ್ಯರುಗಳಲ್ಲಿ ಒಬ್ಬರಾದ ಸ್ವಾಮಿ ವಿಜ್ಞಾನಾನಂದರ ಪೂರ್ವಾಶ್ರಮದ ಹೆಸರು ಹರಿಪ್ರಸನ್ನ ಚಟ್ಟೋಪಾಧ್ಯಾಯ. ಉನ್ನತ ಶಿಕ್ಷಣವನ್ನು ಪಡೆದು ಆಗಿನ ಕಾಲದಲ್ಲೇ ನುರಿತ ಇಂಜಿನಿಯರ್ ಆಗಿದ್ದ ಶ್ರೀ ಹರಿಪ್ರಸನ್ನರು ಶ್ರೀರಾಮಕೃಷ್ಣರಿಂದ ಪ್ರಭಾವಿತರಾಗಿ ಸ್ವಾಮಿ ವಿಜ್ಞಾನಾನಂದರಾದದ್ದು ಒಂದು ರೋಚಕ ಕಥೆ. ಮಿತಭಾಷಿಯಾಗಿದ್ದ ಅವರ ಮಹಾನ್ ವ್ಯಕ್ತಿತ್ವದ ಪರಿಚಯ ಸುಲಭಸಾಧ್ಯವಲ್ಲ. ಅವರ ಜೀವನದ ಅಪೂರ್ವ ಘಟನೆಗಳನ್ನು ಸಾಧುಸಂತರ ಹಾಗೂ ಭಕ್ತರ ನೆನಪಿನಾಳದಿಂದ ಸಂಗ್ರಹಿಸಿ ಈ ಪುಸ್ತಕದಲ್ಲಿ ನೀಡಲಾಗಿದೆ.

### ೧೫) ಅದ್ಭುತ ಸಂತ (ಸ್ವಾಮಿ ಅದ್ಭುತಾನಂದರ ಜೀವನ ಚರಿತ್ರೆ)

ಬಿಹಾರದ ಹಳ್ಳಿಯೊಂದರ ಕುರುಬರ ಬಡಕುಟುಂಬದಲ್ಲಿ ಜನಿಸಿದ, ಓದು ಬರಹ ಬಾರದ ರಕ್ತುರಾಮ, ಭಗವತ್ಸಾಕ್ಷಾತ್ಕಾರ ಪಡೆದದ್ದು, ಸ್ವಾಮಿ ಅದ್ಭುತಾನಂದರಾಗಿ ರೂಪುಗೊಂಡಿದ್ದು ಒಂದು ರೋಚಕ ಕಥೆ. ಈ ಅದ್ಭುತ ಜೀವನದ ವಿವರಗಳನ್ನು




ಬಂಗಾಳಿ ಮೂಲದ ಗ್ರಂಥಗಳಿಂದ ಸಂಗ್ರಹಿಸಿ ಕನ್ನಡಕ್ಕೆ ಅನು ವಾದಿಸಲಾಗಿದೆ.

### ೧೬) ಗುರುವಿನೊಡನೆ ದೇವರಡಿಗೆ

ಶ್ರೀರಾಮಕೃಷ್ಣರ ಅಪೂರ್ವ ತಪೋಮಯ ಜೀವನವೃಕ್ಷವು ಅನೇಕ ಫಲಪುಷ್ಪಗಳನ್ನು ನೀಡಿತು. ಅಂತಹ ಅತ್ಯುತ್ತಮ ಫಲಗಳಲ್ಲಿ ಒಬ್ಬರು ಸ್ವಾಮಿ ಶಿವಾನಂದರು. ಅವರ ಆಧ್ಯಾತ್ಮಿಕ ಜೀವನದ ತುಂಬು ಅನುಭವದಿಂದ ಹೊರಹೊಮ್ಮಿದ ಪ್ರೇಮಮಯ ನುಡಿಗಳ ಸಂಗ್ರಹವೇ ಈ ಗ್ರಂಥ. ಇದನ್ನು ಮೂಲ ಬಂಗಾಳಿಯಲ್ಲಿ ಸಂಗ್ರಹಿಸಿದವರು ಅವರ ಶಿಷ್ಯರಾದ ಸ್ವಾಮಿ ಅಪೂರ್ವಾನಂದರು. ಸ್ವಾಮಿ ಶಿವಾನಂದರಿಂದಲೇ ಮಂತ್ರದೀಕ್ಷೆಯನ್ನು ಪಡೆದು ಅವರ ಶಿಷ್ಯ ಪರಂಪರೆಗೆ ಸೇರಿದ ರಾಷ್ಟ್ರಕವಿ ಶ್ರೀಕುವೆಂಪು ಅವರೇ ತಮ್ಮ ಗುರುಭಕ್ತಿಯ ಕಾಣಿಕೆಯಾಗಿ ಇದನ್ನು ಕನ್ನಡಕ್ಕೆ ಅನುವಾದಿಸಿರುವುದು ಕನ್ನಡಿಗರ ಸೌಭಾಗ್ಯವೆನ್ನಬಹುದು.

ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಹಾಗೂ ಸ್ವಾಮಿ ವಿವೇಕಾನಂದರು – ಇವರ ಜೀವನ ಸಂದೇಶಗಳ ಕೃತಿಗಳ ಮೇಲೆ ಹೊಸ ಬೆಳಕನ್ನು ಬೀರಿರುವ ಈ ಗ್ರಂಥವು ನೊಂದ ಹೃದಯಕ್ಕೆ ಸಾಂತ್ವನವನ್ನು, ಆಧ್ಯಾತ್ಮಿಕ ಸಾಧಕರಿಗೆ ಮಾರ್ಗದರ್ಶನವನ್ನು ನೀಡುತ್ತದೆ. ಆಧ್ಯಾತ್ಮಿಕ ಆಸಕ್ತಿಯುಳ್ಳ ಪ್ರತಿಯೊಬ್ಬರೂ ಓದಲೇಬೇಕಾದ ಅಪೂರ್ವ ಕೃತಿ ಇದು.

### ೧೭) ಅಂತರ್ಮುಖಿ – ಸ್ವಾಮಿ ಬ್ರಹ್ಮಾನಂದರ ದಿವ್ಯಸ್ಮೃತಿ

ಸ್ವಾಮಿ ಬ್ರಹ್ಮಾನಂದರ ದಿವ್ಯಜೀವನ, ಸಾಧನೆಗೆ ಉಪಯುಕ್ತ ಉಪದೇಶಗಳು, ತಪಸ್ಸು, ಪರ್ಯಟನ ವೃತ್ತಾಂತ, ಗುರುಭಾವ ಮತ್ತು ಸಂಘದ ಪರಿಪಾಲನೆ, ಸಾಧು ಮತ್ತು ಭಕ್ತರ ಆಧ್ಯಾತ್ಮಿಕ ಜೀವನದ ಮುನ್ನಡೆಗೆ ಮಾರ್ಗದರ್ಶನ, ಅವರ ತಂದೆ-ತಾಯಿ ಮತ್ತು ತಮ್ಮ ಸೋದರ ಸಂನ್ಯಾಸಿಗಳ ನೆನಪು, ಅವರ ಆಡಳಿತ ವಿಧಾನ, ಮತ್ತು ಸಾಧುಗಳು ಹಾಗೂ ಭಕ್ತರನ್ನು ಸುಸಂಸ್ಕೃತರನ್ನಾಗಿಸುತ್ತಿದ್ದ ಕೌಶಲ, ಹಾಸ್ಯಪ್ರಜ್ಞೆ, ತೋಟಗಾರಿಕೆ, ಗೋಸೇವೆ ಇತ್ಯಾದಿಗಳಿಂದ ಹಿಡಿದು ಸಮಾಧಿಯವರೆಗೆ ಸಮಸ್ತವೂ ಈ ನೆನಪುಗಳ ಸಂಕಲನ ಗ್ರಂಥದಲ್ಲಿ ಹರಡಿಕೊಂಡಿದೆ.




### ೧೮) ದೇವರೊಡನೆ ಬಾಳಿದವರು (ಭಾಗ ೧ ಮತ್ತು ಭಾಗ ೨)

ಈ ಕೃತಿಗಳು ಶ್ರೀರಾಮಕೃಷ್ಣರ ೧೬ ಸಂನ್ಯಾಸೀ ಶಿಷ್ಯರ ಹಾಗೂ ೩೧ ಗೃಹಸ್ಥ ಭಕ್ತರ ಜೀವನಕಥೆಗಳ ಸಾಕ್ಷ್ಯವನ್ನು ರಕ್ಷಿಸಿಡುವ, ಹೃದಯಂಗಮವಾದ ಪರಸ್ಪರ ಪೂರಕಗ್ರಂಥ ವಾಗಿದೆ. ಶ್ರೀರಾಮಕೃಷ್ಣರ ಭಕ್ತ ಅನುಯಾಯಿಗಳು, ಹೊರಗಿನ ಕುತೂಹಲಿಗಳು ಈ ಕೃತಿಗಳಲ್ಲಿ ಶ್ರೀರಾಮಕೃಷ್ಣರ ಗೃಹೀಭಕ್ತರ ಬಗ್ಗೆ ಆಕರ್ಷಕ ವಿಷಯವಸ್ತುವನ್ನು, ಅವರ ನೇರ ಸಂನ್ಯಾಸಿ ಶಿಷ್ಯರ ಬಗೆಗಿನ ಕುತೂಹಲಕಾರಿ ಕಥಾನಕಗಳನ್ನು ಕಾಣಬಹುದು.

### ಉಪಸಂಹಾರ

ಈ ಮೇಲ್ಕಂಡ ಪುಸ್ತಕಗಳು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಟಗೊಂಡಿವೆ. ಇವಲ್ಲದೆ ಬೆಂಗಳೂರಿನ 'ವಿವೇಕಹಂಸ' ಪ್ರಕಾಶನವು ಶ್ರೀರಾವ ಕೃಷ್ಣರ ಸಂನ್ಯಾಸಿ ಹಾಗೂ ಗೃಹೀಶಿಷ್ಯರ ಜೀವನ ಚರಿತ್ರೆಯನ್ನು ಒಳಗೊಂಡ ಅನೇಕ ಕಿರುಹೊತ್ತಿಗೆಗಳನ್ನು ಪ್ರಕಟಪಡಿ ಸಿದೆ. ಸರಳ ಕನ್ನಡದಲ್ಲಿನ ಈ ಪುಸ್ತಕಗಳು ಓದುಗರಿಗೆ ರಸದೌತಣ ಉಣಬಡಿಸು ತ್ತದೆ. ಇದಲ್ಲದೆ ಹುಬ್ಬಳ್ಳಿಯ ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮವು 'ಶ್ರೀ ರಾಮಕೃಷ್ಣಮಯ ಮಾಸ್ಟರ್ ಮಹಾಶಯ' ಎಂಬ ಪುಸ್ತಕವನ್ನು ಪ್ರಕಟಿಸಿದೆ. ಇದು ಶ್ರೀರಾಮಕೃಷ್ಣರ ಗೃಹೀ ಭಕ್ತನೂ ಹಾಗೂ 'ಶ್ರೀರಾಮಕೃಷ್ಣ ವಚನವೇದ'ವನ್ನು ಬರೆದ ಮಾಸ್ಟರ್ ಮಹಾಶಯನೆಂದು ಖ್ಯಾತರಾದ ಮಹೇಂದ್ರನಾಥ ಗುಪ್ತರ ಜೀವನ ಚರಿತ್ರೆ. ಬಂಗಾಳಿಯಲ್ಲಿ ಪ್ರಕಟಿತವಾದ ಅನೇಕ ಪುಸ್ತಕಗಳನ್ನು ಅಧ್ಯಯನ ಮಾಡಿ, ಕನ್ನಡದಲ್ಲಿ ಈ ಜೀವನ ಚರಿತ್ರೆಯನ್ನು ಬರೆಯಲಾಗಿದೆ. ಈ ಮೇಲ್ಕಂಡ ಗ್ರಂಥಗಳಷ್ಟೇ ಅಲ್ಲದೆ, ಇಂತಹ ಹಲವು ಪುಸ್ತಕಗಳು ಕನ್ನಡದಲ್ಲಿ ಲಭ್ಯವಿವೆ. ಅವೆಲ್ಲವನ್ನೂ ಇಲ್ಲಿ ಪ್ರಸ್ತುಪಡಿಸುವುದು ಸುಲಭ ಸಾಧ್ಯವಲ್ಲ. ಆದ್ದರಿಂದ ಈ ಕೆಲವು ಗ್ರಂಥಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಿದ್ದೇವೆ. ❀

> "ಹೇ ಭರತಖಂಡವೇ, ಜಾಗೃತವಾಗು ! ನಿನ್ನ ಅಧ್ಯಾತ್ಮದಿಂದ ಪ್ರಪಂಚವನ್ನು ಗೆಲ್ಲು. ಮೊದಲೇ ನಮ್ಮ ದೇಶದಲ್ಲಿ ಸಾಧಿಸಿದಂತೆ, ಪ್ರೇಮವು ದ್ವೇಷವನ್ನು ಗೆಲ್ಲಬೇಕು, ದ್ವೇಷವು ದ್ವೇಷವನ್ನು ಗೆಲ್ಲಲಾರದು.
>
> ನಾವು ಹೊರಗೆ ಹೋಗಬೇಕು. ಆಧ್ಯಾತ್ಮಿಕ ವಿದ್ಯೆಯನ್ನು ಅವರಿಗೆ ಕೊಟ್ಟು ಅವರ ವಿದ್ಯೆಯನ್ನು ನಾವು ಕಲಿಯೋಣ. ಆಧ್ಯಾತ್ಮಿಕ ಪ್ರಪಂಚದ ಅದ್ಭುತಗಳನ್ನು ಭೌತಿಕ ಪ್ರಪಂಚದ ಅದ್ಭುತಗಳಿಗಾಗಿ ವಿನಿಮಯ ಮಾಡೋಣ. ನಾವು ಯಾವಾಗಲೂ ವಿದ್ಯಾರ್ಥಿಗಳೇ ಆಗಿರುವುದಿಲ್ಲ. ಗುರುಗಳೂ ಆಗುವೆವು."
>
> — ಸ್ವಾಮಿ ವಿವೇಕಾನಂದ